ಕರ್ನಾಟಕ ಸರ್ಕಾರ

ನಂ. Comp 9 /2003-04

ನೋಂದಣಿ ಮಹಾಪರಿವೀಕ್ಷಕರು
ಹಾಗೂ ಮುದ್ರಾಂಕಗಳ ಆಯುಕ್ತರ ಕಛೇರಿ,
7ನೇ ಮಹಡಿ, BWSSB ಕಟ್ಟಡ,
ಕಾವೇರಿ ಭವನ, ಬೆಂಗಳೂರು,
ದಿನಾಂಕ 29.09.2004.

ಗಣಕೀಕರಣ
ಸುತ್ತೋಲೆ - 11

ವಿಷಯ:- ಪ್ರತಿದಿನವೂ ನೋಂದಾಯಿಸಿದ ದಸ್ತಾವೇಜುಗಳನ್ನು ತಕ್ಷಣವೇ ಸ್ಕ್ಯಾನಿಂಗ್ ಮಾಡುವ ಕುರಿತು.

**

ದಸ್ತಾವೇಜನ್ನು ಹಾಜುರುಪಡಿಸಿದ 30 ನಿಮಿಷಗಳೊಳಗಾಗಿ ಸಂಬಂಧಪಟ್ಟವರಿಗೆ ದಸ್ತಾವೇಜುಗಳನ್ನು ಹಿಂದಿರುಗಿಸುವ ಉದ್ದೇಶದಿಂದಲೇ ಕಾವೇರಿ ಸಾಫ್ಟ್‌ವೇರ್‌ನ್ನು ಅನುಷ್ಠಾನಗೊಳಿಸಲಾಗಿದೆ.

2) ಕೆಲವೊಂದು ಉಪನೋಂದಣಾಧಿಕಾರಿ ಕಛೇರಿಯಲ್ಲಿ ನೋಂದಾದ ದಸ್ತಾವೇಜುಗಳನ್ನು ತಕ್ಷಣವೇ ಸ್ಕ್ಯಾನಿಂಗ್ ಮಾಡುತ್ತಿಲ್ಲ, ಸ್ಕ್ಯಾನಿಂಗ್ ಮಾಡುವಾಗ ಆಯಾ ನೋಂದಣಿ ಯೂನಿಟ್‌ನಲ್ಲಿ ನೋಂದಣಿ ಕಾಯ್ದೆ 1908ರ ಪ್ರಕರಣ 52(c) ರಂತೆ ಕ್ರಮಬದ್ಧವಾಗಿ ಮಾಡುತ್ತಿಲ್ಲ, ದಸ್ತಾವೇಜಿಗೆ ಉಪನೋಂದಣಾಧಿಕಾರಿಯವರು ಸಹಿಯನ್ನು ಅರ್ಧಂಬರ್ಧ ಮಾಡುವುದು, ಸಹಿ ಮಾಡದೇ ಇರುವುದು ಮುಂತಾದ ಕಾರಣಗಳಿಂದ ವಿಳಂಬ ನೀತಿ ಅನುಸರಿಸುತ್ತಿರುವುದು ನನ್ನ ಗಮನಕ್ಕೆ ಬಂದಿದೆ.

3) ಕಾವೇರಿ ಸಾಫ್ಟ್‌ವೇರ್‌ನಲ್ಲಿ 2.5 ಪ್ಯಾಚನ್ನು ಅಳವಡಿಸಲು ಜಿಲ್ಲಾ ನೋಂದಣಾಧಿಕಾರಿಗಳಿಗೆ C.D ಕಳುಹಿಸಿ ಕೊಡಲಾಗಿದೆ. ಈ ಪ್ಯಾಚನ್ನು ಅಳವಡಿಸಿದ ನಂತರ ಸ್ಕ್ಯಾನಿಂಗ್ ಕಂಪ್ಯೂಟರ್‌ನಲ್ಲಿ 1.2 G.B ಸಾಮರ್ಥ್ಯದಷ್ಟು ಮಾಹಿತಿ ಸಂಗ್ರಹವಾದ ನಂತರ ಈ ಮಾಹಿತಿಯನ್ನು C.D ಯಲ್ಲಿ ಬರೆಯಲೇಬೇಕು.

ಪು.ತಿ.ನೋ.2

ಒಂದು ವೇಳೆ ಬರೆಯಲು ವಿಳಂಬ ಮಾಡಿದರೆ, ಮುಂದಿನ ದಸ್ತಾವೇಜನ್ನು ನೋಂದಣಿಗೆ ಸ್ವೀಕರಿಸದಂತೆ ಸಾಫ್ಟ್‌ವೇರ್ ತಡೆಹಿಡಿಯುತ್ತದೆ. ಆದ್ದರಿಂದ ನೋಂದಾಯಿಸಿದ ತಕ್ಷಣವೇ ಸ್ಕ್ಯಾನಿಂಗ್‌ನ್ನು ಮಾಡತಕ್ಕದ್ದು.

4) ಜಿಲ್ಲಾ ನೋಂದಣಾಧಿಕಾರಿಗಳು ಈ ವಿಷಯ ಕುರಿತು ಪ್ರತಿಯೊಂದು ಉಪನೋಂದಣಾಧಿಕಾರಿಗಳ ಕಛೇರಿಗೆ ಭೇಟಿ ನೀಡಿ ನೋಂದಣಿಯ ಈ ಪ್ರಕ್ರಿಯೆ ಕಾವೇರಿ ಸಾಫ್ಟ್‌ವೇರ್‌ನಲ್ಲಿ ಸುಗಮವಾಗಿ ನಡೆಯುತ್ತಿದೆಯೇ ಎಂಬ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳಲು ಸೂಚಿಸಿದೆ.

(ಸಿ. ಕೃಷ್ಣಪ್ಪ)
ನೋಂದಣಿ ಮಹಾಪರಿವೀಕ್ಷಕರು
ಹಾಗೂ ಮುದ್ರಾಂಕಗಳ ಆಯುಕ್ತರು,
ಬೆಂಗಳೂರು.

1. ರಾಜ್ಯದ ಎಲ್ಲಾ ಜಿಲ್ಲಾ ನೋಂದಣಾಧಿಕಾರಿಗಳಿಗೆ
2. ರಾಜ್ಯದ ಎಲ್ಲಾ ಉಪನೋಂದಣಾಧಿಕಾರಿಗಳಿಗೆ
3. ಈ ಕಛೇರಿಯ ಎಲ್ಲಾ ಅಧಿಕಾರಿಗಳಿಗೆ.
4. ಗಾರ್ಡ್ ಫೈಲ್
5. ಕಛೇರಿ ಕಡತಕ್ಕೆ

ಪ್ರತಿಯನ್ನು ಮಾಹಿತಿಗಾಗಿ
1. CMS Computers Ltd., IInd Floor, Laxmi Complex, No.54, St. Marks Road, Bangalore -1.
2. ECIL Computers Ltd., No.30/1, Cunningham Road, Bangalore-52.